SRI BHEEMANNA KHANDRE.—It is not a question of inconvenience or convenience. It is a question of principle.

MR. SPEAKER.—Unless I call the members, they should not speak

SR B. BASAVALINGAPPA.—Sir, the point remains unsettled.

SRI GOVINDA P. WODEYARAJ.—Sir, the Hon'ble Minister is disobeying the ruling of the Chair.

SRI B. BASAVALINGAPPA.—Sir, this matter cannot be closed ; we have got to discuss it.

MR. SPEAKER.—Let us take up Questions.

Reconsidering the ruling on withholding consent to an Adjournment motion

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ. ತಾವು ಒಂದು ವಿಚಾರವನ್ನು ಅಪ್ಪಣೆ ಕೊಡಿಸಿದ್ದೀರಿ.....

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೇ, ಆ ವಿಷಯ ಈಗ ತೆಗೆದುಕೊಳ್ಳುವುದು ಬೇಡ. ಪ್ರಶ್ನೋತ್ತರ ವೇಳೆ ಆದಮೇಲೆ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಮೇಲೆ ನಾನು ಕೇಳುವುದಿಲ್ಲ.

ಅಧ್ಯಕ್ಷರು.—ವಿರೋಧಪಕ್ಷದ ನಾಯಕರು ಈ ರೀತಿಯು ಮಾರ್ಗಕ್ಕೆ ಹೋಗುವುದು ವಿಷಾದಕರ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಈ ಮನೆಯಲ್ಲಿ ನಡೆದಂಥ ಘಟನೆಯು ಬಗ್ಗೆ ನಾನೂ ಹೇಳಬೇಕಾಗುತ್ತದೆ. ಈ ಸಭೆಯ ನಿಯಮಗಳ ರೀತಿ ನಡೆದುಕೊಳ್ಳಬೇಕಾದುದು ನಮ್ಮ ಕರ್ತವ್ಯ ಆದೇರೀತಿ ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥಾದ್ದು ನಿಮ್ಮ ಕರ್ತವ್ಯ. ಈಗ ನನ್ನ ಮಾತು ಇಷ್ಟೆ.....

ಅಧ್ಯಕ್ಷರು.—ತಾವು ಹೀಗೆ ಎದ್ದು ನಿಂತುಕೊಂಡು ಮಾತನಾಡುವುದಾದರೆ ನಾನು ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಇದಕ್ಕೆ ಅವಕಾಶ ಕೊಡದಿದ್ದರೆ ನಾವು ಮುಂದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಅಧ್ಯಕ್ಷರು.—ತಾವು ಪ್ರಶ್ನೋತ್ತರ ವೇಳೆ ಆಗಲಿ ಎಂದು ಹೇಳಿದ್ದೀರಿ ; ಮತೆ ಅದೇ ವಿಚಾರವನ್ನು ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಸಭೆಯ ಘನತೆ-ಗೌರವಗಳಿಗೆ ಧಕ್ಕೆ ಬರತಕ್ಕಂಥ ಪ್ರಸಂಗಗಳು ಇಲ್ಲಿ ಆಗಿರುವುದರಿಂದ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆಯ ದಿವಸ ನಾನು ಒಂದು ನಿಲುವಳಿ ಸೂಚನೆಯನ್ನು ತಂದಿದ್ದೆ. ನಾವು ಇನ್ನೂ ಅನೇಕ ಜನ ಸದಸ್ಯರು ಮಾತನಾಡುವವರು ಇದ್ದೆವು. ಅದಕೆ ಅವಧಿ ಬೇಕು ಎಂದು ಕೇಳಿಕೊಳ್ಳುತ್ತಿದ್ದೆವು.

ಅಧ್ಯಕ್ಷರು.—ತಾವು ಈಗ ಏನು ಹೇಳುತ್ತಿದ್ದೀರಿ ಆ ವಿಷಯವನ್ನು ಆಮೇಲೆ ಮಾತನಾಡೋಣ ಎಂದು ಹೇಳಿದ್ದೇನೆ. ಮೊದಲು ಪ್ರಶ್ನೋತ್ತರ ವೇಳೆ ಆಗಲಿ, ಆಮೇಲೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕ್ರಿಯೋಲೋಪ; ಕೆಲವು ವರ್ಷಗಳಿಂದ ನಾನೂ ಕೂಡ ಈ ಸದನದ ಸದಸ್ಯನಾಗಿದ್ದೇನೆ. ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದೇನೆ. ತಾವು ಈ ಪ್ರಶ್ನೋತ್ತರ ವೇಳೆಗೆ ಮುಂಚೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೀರಿ.

ಶ್ರೀ ಎಸ್. ಆರ್. ಜೊಮ್ಮಾಯಿ.—ಮಾನ್ಯ ಮಂತ್ರಿಯವರು ಪ್ರಶ್ನೋತ್ತರ ವೇಳೆಗೆ ಮುಂಚೆ ಕ್ರಿಯಾಲೋಪವನ್ನು ಹೇಗೆ ಎತ್ತುತ್ತಾರೆ ?

ಶ್ರೀ ಎಸ್. ಬಂಗಾರಪ್ಪ.—ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡಿದ್ದೇನೆ.

ಅಧ್ಯಕ್ಷರು.—ಈಗ ನಾನು ಹೇಳುವುದೇನೆಂದರೆ ನಿನ್ನೆ ದಿವಸ ಸಲುವಳಿ ಸೂಚನೆ ಬಗ್ಗೆ ನನ್ನ ರೂಲಿಂಗ್ ಕೊಡುವಾಗ ಅದಕ್ಕೆ ಒಪ್ಪಿಗೆ ಕೊಡಲಿಲ್ಲವಲ್ಲ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಆದರ ಬಗ್ಗೆ ಪ್ರಶ್ನೋತ್ತರ ವೇಳೆ ಆದಮೇಲೆ ಪಾತನಾಡೋಣ ಎಂದು ಹೇಳಿದ್ದೇನೆ. ಈಗ ತಮ್ಮ ಕ್ರಿಯಾಲೋಪವನ್ನು ಎತ್ತುವುದಕ್ಕೆ ಅವಕಾಶಕೊಟ್ಟರೆ ಅದು ಸರಿಯಾಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ.

SRI M. C. NANAIAH.—Sir, I rise on a point of Order. I want to know whether the Ruling given by the Chair yesterday can be a subject matter of discussion today by any member ?

SRI GOVINDA P. WADEYARAJ.—Sir, I am on a counter Point of Order.

ಅಧ್ಯಕ್ಷರು.—ಹೀಗೆ ೪-೫ ಜನ ಒಟ್ಟಿಗೆ ನಿಂತುಕೊಂಡರೆ ಯಾವ ಕ್ರಿಯಾಲೋಪ ಇರುತ್ತೆ? ಒಂದು ಕ್ರಮ ಇಲ್ಲದೇ ಇರುವಾಗ ಏನು ಕ್ರಿಯಾಲೋಪ ಕೇಳುತ್ತೀರಿ? ಮೊದಲು ದಯಮಾಡಿ ಪ್ರಶ್ನೆಗಳನ್ನು ಕೇಳಿ; ಆಮೇಲೆ ಏನಾದರೂ ಇದ್ದರೆ ಪ್ರಸ್ತಾಪ ಮಾಡಿ. ಆದರ ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಗೋವಿಂದ ಪಿ. ಬಡೆಯರಾಜ್.—ಶ್ರೀಮಾನ್ ಬಂಗಾರಪ್ಪನವರು ಕ್ರಿಯಾಲೋಪ ಎತ್ತಿದರು. ಶ್ರೀಮಾನ್ ನಾನಯ್ಯನವರು ಕ್ರಿಯಾಲೋಪ ಎತ್ತಿದರು. ನಾನೂ ಕ್ರಿಯಾಲೋಪ ಎತ್ತುತ್ತೇನೆ.

ಅಧ್ಯಕ್ಷರು.—ಯಾರದೂ ಕ್ರಿಯಾಲೋಪ ಎತ್ತುವುದು ಬೇಡ. ಪ್ರಶ್ನೋತ್ತರ ವೇಳೆ ಆದಮೇಲೆ ಆ ವಿಚಾರ ಎತ್ತಿದಾಗ ಅವರು ಮಾತನಾಡಲಿ.

SRI M. C. NANAIAH.—Sir, if the hon. the Leader of the Opposition were to again raise the issue, then I will have to rise on a Point of Order.

ಶ್ರೀ ಎಸ್. ಎಸ್. ಆರಕೇರಿ.—ನಿನ್ನೆ ತಾವು ಏನು ರೂಲಿಂಗ್ ಕೊಟ್ಟಿದ್ದೀರಿ ಅದು ವಿರೋಧಪಕ್ಷದ ಸದಸ್ಯರಿಗೆ ಆಗೌರವ ತಂದಂತಾಗಿದೆ. ಅದನ್ನು ನಾವು ಸಹಿಸುವುದಿಲ್ಲ. ದಯಮಾಡಿ ನಾವು ಹೇಳುವುದನ್ನು ಕೇಳಿ.

ಅಧ್ಯಕ್ಷರು.—ಅದನ್ನು ಈಗ ಪ್ರಸ್ತಾಪ ಮಾಡಬೇಕು ಎಂದರೆ ಆ ಕಡೆಯ ಮಾನ್ಯಸದಸ್ಯರು ಇಲ್ಲಿ ಕ್ರಿಯಾಲೋಪ ಎತ್ತುತ್ತಾರೆ. ಆಗ ನಾನು ರೂಲಿಂಗ್ ಕೊಡಬೇಕಾಗುತ್ತದೆ. This is a Question Hour; let us take up the questions first and after the questions are over, then the hon. member can raise his Point of Order. I hope the House is convinced.

ಶ್ರೀ ಎಸ್. ಆರ್. ಜೊಮ್ಮಾಯಿ.—ಅದನ್ನು ನಾನೂ ಒಪ್ಪುತ್ತೇನೆ: ನಾನು ಒಬ್ಬನೇ ಅಂತ ಅಲ್ಲ ಎಲ್ಲರೂ. ನಾವೂ ಸಹ ನಿಯಮದ ಪ್ರಕಾರ ನಡೆದುಕೊಳ್ಳಬೇಕು. ಆ ಕಡೆಯ ಸದಸ್ಯರೂ ಸಹ ನಿಯಮದ ಪ್ರಕಾರ ನಡೆದುಕೊಳ್ಳಬೇಕು; ತಾವು ಸಹ ನಿಯಮದ ಪ್ರಕಾರ ನಡೆದುಕೊಳ್ಳಬೇಕು. ನಿನ್ನೆ ನಾನು ಆ ವಿಚಾರ ಪ್ರಸ್ತಾಪ ಮಾಡಿದಾಗ ಈ ಕಡೆಯ ಸದಸ್ಯರ ಹಕ್ಕು ಮೊಟಕಾಗಿದೆ ಎಂಬ ಭಾವನೆ ನಮ್ಮಲ್ಲಿ ಬಂದಿದೆ. ಕಾರಣ ಇಷ್ಟೆ, ಸರ್ಕಾರದವರು ಮುನಿಸಿಪಲ್ ಎಲೆಕ್ಷನ್ ಅನ್ನು ಮುಂದಕ್ಕೆ ಹಾಕಿದಾಗ...

ಶ್ರೀ ಎಂ. ಸಿ. ನಾನಯ್ಯ.—ನಾನು ಆ ವಿಷಯದ ಮೇಲೆ ಕ್ರಿಯಾಲೋಪ ಎತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಸರ್ಕಾರದವರು ಮುನಿಸಿಪಲ್ ಎಲೆಕ್ಷನ್ ಅನ್ನು ಮುಂದಕ್ಕೆ ಹಾಕಿದ್ದರಿಂದ, ಆ ವಿಷಯದ ಮೇಲೆ ಮಾತನಾಡುವುದಕ್ಕೆ ನಾನು ಅವಕಾಶ ಕೇಳುತ್ತಿದ್ದೆನು. ಹೌಸ್ ಆರ್ಡರ್‌ನಲ್ಲಿ ಇಲ್ಲದೇ ಇರುವಾಗ ನನ್ನ ನಿಲುವಳಿ ಸೂಚನೆ ತಿರಸ್ಕೃತ ಆಯಿತು ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಈಗ ನಾನು ಕೇಳುವುದೆಂದರೆ ಸರ್ಕಾರದವರು ಮುನಿಸಿಪಲ್ ಎಲೆಕ್ಷನ್ಸ್ ಮಾಡುವ ಬಗ್ಗೆ ಸ್ಪಷ್ಟವಾದ ಆಶ್ವಾಸನೆಯನ್ನು ಕೊಡಬೇಕು. ಈ ಬಗ್ಗೆ ಸಿಂಬಲ್ ರೂಲ್ಸನ್ನು ಅಮೆಂಡ ಮೆಂಟ್ ಮಾಡಿ ಎಲೆಕ್ಷನ್ ಮಾಡಬಹುದು ಅಲ್ಲಿಯವರೆಗೆ ಸ್ಥಾನೀಕ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಬೇಕಾಗಿರುವ ಚುನಾವಣೆಗಳನ್ನು ಮುಂದೂಡುವ ಕೆಲಸವನ್ನು ಸರ್ಕಾರದವರು ಮಾಡಬೇಕು. ಆ ರೀತಿ ಮಾಡದೇ ನಾವು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಒಂದು ಭರವಸೆಯನ್ನು ಕೊಡುವವರೆಗೆ ಈ ಮನೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕೆ ನಾವು ತಯಾರು ಇಲ್ಲ. ಅಲ್ಲಿಯವರೆಗೆ ನಾವು ಧರಣಿ ಕುಳಿತುಕೊಳ್ಳುತ್ತೇವೆ.

(ಮಾನ್ಯ ವಿರೋಧಪಕ್ಷದ ಸದಸ್ಯರು ಧರಣಿ ಕುಳಿತರು)

(*The House was in disorder*)

MR. SPEAKER.—I appeal to the Hon. Leader of the Opposition and the members kindly to resume their seats so that we shall have further discussion according to the rules.

SRI S. R. BOMMAI.—Unless the Government gives an assurance to the demand made by us, we will not resume our seats.

(*The Opposition members refused to resume their seats*)

MR. SPEAKER.—The House stands adjourned for half-an-hour.

[*The House rose at Fifty-five Minutes past One of the Clock and reassembled at Three of the Clock*].

(MR. SPEAKER in the Chair.)

MR. SPEAKER.—Let us take up Questions.

SRI H. D. DEVE GOWDA.—Sir, as per the agreement, the Hon'ble Minister for Revenue has to make a brief statement and in turn the hon. the Leader of the Opposition will make a brief statement and then we can take up the Agenda.

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯಸದಸ್ಯರು ವ್ಯಕ್ತಪಡಿಸಿರತಕ್ಕಂಥ ವಿಷಯ ನಮಗೂ ಮಹತ್ತರ ಇದೆ. ಹಾಗೆ ಅವರಿಗೂ ಕೂಡ ಮಹತ್ತರ ಇದೆ. ಅವರು ಧರಣಿ ಮಾಡಿದ ರೀತಿಯಲ್ಲಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ನಾವೆಲ್ಲರೂ ಕೂಲಂಕಷವಾಗಿ ವಿಚಾರ ಮಾಡಿ ಏನು ಒಂದು ನಿರ್ಣಯ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ತೀರ್ಮಾನವನ್ನು ಸ್ವಲ್ಪ ಹೆಚ್ಚು ಕಡಿಮೆ ತೆಗೆದುಕೊಂಡಿದ್ದೇವೆ. ಅದನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪುತ್ತಾರೆಂದು ಕಾಣುತ್ತದೆ. ಇವತ್ತು ಮುನಿಸಿಪಾಲಿಟಿ ಚುನಾವಣೆಗಳು ಮುಂದೂಡಲ್ಪಟ್ಟಿವೆ, ಇದಕ್ಕೆ ಕಾರಣ ಅಂದರೆ ಕೆಲವರು ಸಿಂಬಲ್ ವಿಚಾರದಲ್ಲಿ ಹೈಕೋರ್ಟಿನಲ್ಲಿ ತಕರಾರು ಎತ್ತಿದ್ದಾರೆ. ಹಾಗೆ ಕೆಲವರು ವಿರೋಧ ಪಕ್ಷದ ಸದಸ್ಯರು ಕೂಡ ತಕರಾರು ಎತ್ತಿದ್ದಾರೆ, ಅದು ಹೈಕೋರ್ಟಿನ ಮುಂದೆ ಇದೆ. ಈ ರೀತಿ ತಕರಾರು ಎತ್ತಿರುವ ಸಂದರ್ಭದಲ್ಲಿ ನಾವು ಯಾವುದೇ ಒಂದು ನಿರ್ದಿಷ್ಟವಾದ ನಿರ್ಣಯ ತೆಗೆದುಕೊಳ್ಳಬಾರದು ಎಂದು ತೀರ್ಮಾನ ತೆಗೆದುಕೊಂಡು. ಈ ಚುನಾವಣೆ ಮಾಡತಕ್ಕಂಥಾದ್ದನ್ನು ಮುಂದೆ ಹಾಕಿದ್ದೇವೆ. ಆದರ ಬಗ್ಗೆ ನಮ್ಮ ಸ್ನೇಹಿತರು ಕಳವಳ ವ್ಯಕ್ತಪಡಿಸಿದ್ದಾರೆ, ನಾನು ಆ ಚರ್ಚೆಯಲ್ಲಿ ಭಾಗಿಯಾಗಿ

ದ್ದೇನೆ. ನಮಗೂ ಕೂಡ ಈ ಚುನಾವಣೆಗಳನ್ನು ಮುಂದೆ ಹಾಕಬೇಕು ಎನ್ನುವ ಇಚ್ಛೆ ಇಲ್ಲ. ಅನಿವಾರ್ಯವಾಗಿ ಚುನಾವಣೆಗಳನ್ನು ಮುಂದೆ ಹಾಕಿದ್ದೇವೆ. ಆದಷ್ಟು ಬೇಗ ಯಾರು ಯಾರು ಹೈಕೋರ್ಟಿನಲ್ಲಿ ಈ ತಕರಾರು ಹಾಕಿದ್ದಾರೆ ಅವರೆಲ್ಲರೂ ಕೂಡ early hearingಗೆ ಪಿಟೀಷನ್‌ಗಳನ್ನು ಮಾಡಿ ತೀರ್ಮಾನ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಮಾನ್ಯ ಸದಸ್ಯರಲ್ಲಿ ಕೇಳಿಕೊಂಡಿದ್ದೇನೆ. ಈಗ ಯಾರು ಅರ್ಜಿ ಹಾಕಿದ್ದಾರೆ ಅವರು early hearingಗೆ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ ಒತ್ತಾಯ ಮಾಡಬೇಕು ಎಂದು ಹೇಳುತ್ತೇನೆ. ನಾವು ಕೂಡ ಅದಕ್ಕೆ ಒಪ್ಪಿದ್ದೇವೆ. ಹೈಕೋರ್ಟಿನಲ್ಲಿ ಎಷ್ಟು ಜಾಗ್ರತೆಯಾಗಿ ತೀರ್ಮಾನವಾಗುತ್ತದೆ ಅಷ್ಟು ಜಾಗ್ರತೆ ನಾವು ಕೂಡ ಎಲೆಕ್ಷನ್ ನಡೆಸಲಿಕ್ಕೆ ಸಿದ್ಧರಾಗಿದ್ದೇವೆ. ಒಂದು ದಿವಸ ಕೂಡ ಈ ಚುನಾವಣೆಗಳನ್ನು ಮುಂದೆ ಹಾಕಲಿಕ್ಕೆ ಸರ್ಕಾರಕ್ಕೆ ಇಚ್ಛೆ ಇಲ್ಲ ತಾಲ್ಲೂಕು ಬೋರ್ಡ್ ಚುನಾವಣೆಗಳಲ್ಲಿ ಇಷ್ಟು ರೀತಿಯಿಂದ ಗದ್ದಾಗ, ಈ ಮುನಿಸಿಪಲ್ ಚುನಾವಣೆಗಳಲ್ಲಿ ನಾವು ಗೆದಿಯುವುದಿಲ್ಲ ಎನ್ನುವ ಭಾವನೆ ಯಾರಿಗಾದರೂ ಇದ್ದರೆ ಅದು ತಪ್ಪು.

ಶ್ರೀ ಗೋವಿಂದ ಪಿ. ಬಡಿಯರಾಜ್.—ಮಾನ್ಯ ಮಂತ್ರಿಗಳು ಒಂದು ರೀತಿಯಿಂದ ಗೆದ್ದಿದ್ದೇವೆ ಎಂದು ಹೇಳಿದರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ನೀತಿಯಿಂದ ಗೆದ್ದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಕೂಡ ಚುನಾವಣೆಗಳಲ್ಲಿ ಗೆಲ್ಲಬೇಕು, ಜನಗಳ ಮನ್ನಣೆಯನ್ನು ಸಂಪಾದನೆ ಮಾಡಬೇಕು ಅದರ ಬಗ್ಗೆ ನಮ್ಮ ಅಭ್ಯಂತರ ಇಲ್ಲ. ಎಲೆಕ್ಷನ್ ಕಮಿಷನರ್ ಬಗ್ಗೆ ಮಾನ್ಯ ಬೊಮ್ಮಾಯಿಯವರು ವಿಚಾರ ಎತ್ತಿದ್ದು, ಈ ಬಗ್ಗೆ ಸರ್ಕಾರದವರು ತೀಪ್ರ ಗದುಸ ಕೊಟ್ಟು ಅವರಿಗೆ ಒಂದು ಕಾಗದ ಬರೆಯಬೇಕು ಎಂದು ಹೇಳಿದ್ದಾರೆ. ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಅವರ ಕೋರಿಕೆ ಸಾಧುವಲ್ಲ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಪುನಃ ಸಂಬಂಧಪಟ್ಟ ಅಧಿಕಾರಿಗಳನ್ನು, ಸಂಬಂಧಪಟ್ಟ ಜನರನ್ನು ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ನಿರ್ಧಾರ ಕೈಗೊಂಡಿದ್ದೇವೆ. ಈ ಬಗ್ಗೆ ಪುನಃ ಸಾಯಂಕಾಲ ಸೇರಿ ತೀರ್ಮಾನ ಮಾಡುತ್ತೇವೆ. ಮಾನ್ಯ ಸದಸ್ಯರು ಸಭೆಯಲ್ಲಿ ಸಹಕಾರ ಮತ್ತು ಬೆಂಬಲವನ್ನು ಕೊಡಬೇಕು. ಬೆಂಬಲ ಎಂದು ಪತಕ್ಕೆ ಹೇಳುತ್ತಿದ್ದೇನೆಂದರೆ ಈ ರೀತಿ ಮಾಡುವುದು ಎಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಸಹಕಾರ ಕೊಟ್ಟು ಈ ಸಭೆ ನಡೆಯಲಿಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ರೀತಿ ಧರಣಿ ಮಾಡತಕ್ಕ ಒಂದು ಪ್ರಸಂಗ ಪತಕ್ಕೆ ಬಂತು ಎಂದು ನಾನು ಪುನಃ ಹೇಳಬೇಕಾಗಿಲ್ಲ. ಈಗ ಮಾನ್ಯ ಮಂತ್ರಿಗಳು ಆದಷ್ಟು ಬೇಗ ಹೈಕೋರ್ಟ್ ಮುಂದೆ ಇರತಕ್ಕ ಪ್ರಕರಣಗಳನ್ನು ತೀಪ್ರವಾಗಿ ನಿರ್ಣಯ ಆಗಲಿಕ್ಕೆ ಸಹಕಾರ ಮಾಡಬೇಕು ಎಂದು ಹೇಳಿದ್ದಾರೆ, ಆದರ ಬಗ್ಗೆ ನಾವು ಎಷ್ಟು ಸಹಕಾರ ಕೂಡಬೇಕು ಅಷ್ಟು ಸಹಕಾರ ಕೊಡುತ್ತೇವೆ. ಈಗ ಈ ಸಭೆಯ ಸದಸ್ಯರು ಅಲ್ಲದೆ ಹೊರಗಡೆಯವರು ಇದ್ದಾರೆ. ಅದರ ಬಗ್ಗೆ ಸರ್ಕಾರ ನವರು ಸಹಕಾರ ಕೊಡಬೇಕು. ಇನ್ನು ಒಂದು ಮಾತು ಈ ಚರ್ಚೆಯಲ್ಲಿ ಬಂತು ಅದು ಏನೆಂದರೆ ಈಗ ಗ್ರಾಜ್ಯುಯೇಟ್ ಕಾನ್‌ಸ್ಟಿಟ್ಯುಯೆನ್ಸಿ ಮತ್ತು ಟೀಚರ್ಸ್ ಕಾನ್‌ಸ್ಟಿಟ್ಯುಯೆನ್ಸಿ ಕ್ಷೇತ್ರದಿಂದ ಕೌನ್ಸಿಲರ್‌ಗೆ ಚುನಾವಣೆಗಳು ಆಗಬೇಕು, ಅವು ನಡೆಯುತ್ತವೆ. ಆದರೆ ಈ ಸ್ಥಾನೀಯ ಪ್ರಾಧಿಕಾರಿ ಕ್ಷೇತ್ರದಿಂದ ಆಗತಕ್ಕ ಚುನಾವಣೆಗಳನ್ನು ಸರ್ಕಾರದ ಒಂದು ವಿನಂತಿ ಮೇರೆಗೆ ಎಲೆಕ್ಷನ್ ಕಮಿಷನರ್ ಮುಂದೆ ಹಾಕಿದ್ದಾರೆ. ಅದೂ ಕೂಡ ೩೦ಕ್ಕೆ ಆಗಬೇಕಾಗಿತ್ತು, ಅದು ಮುಂದೆ ಹೋಗಿದೆ. ಇದೇ ರೀತಿ ಬೇರೆ ರಾಜ್ಯಗಳಲ್ಲೂ ಕೂಡ ಮೂರು ವರ್ಷಗಳಿಂದ ಆಗಿಲ್ಲ ಎನ್ನುವುದು ಇದೆ. ಆಂಧ್ರ ಪ್ರದೇಶದಲ್ಲಿ ಇಂತಹ ಘಟನೆಗಳು ನಡೆದಿದೆ. ಇವತ್ತು ೩೦ಕ್ಕೆ ಚುನಾವಣೆ ಮುಗಿಸಿದ್ದರೆ, ಚುನಾಯಿತ ಸದಸ್ಯರು ಬರುತ್ತಾ ಇದ್ದರು. ಈಗ ಚುನಾವಣೆಯನ್ನು ೨೦ಕ್ಕಿಂಥ ಮುಂದೆ ಹಾಕಲಿಕ್ಕೆ ಕೇಳಿಕೊಂಡಿದೆ ಎನ್ನುವ ಮಾಹಿತಿ ಸಿಕ್ಕಿದೆ. ಈಗ ಮಾನ್ಯ ಮಂತ್ರಿಗಳು ಪುನಃ ಸಂಜೆ ೬ ಗಂಟೆಗೆ ಸೇರಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಾಲ್ಲೂಕು ಬೋರ್ಡ್‌ನಲ್ಲಿ ಅವರು ಗೆದ್ದಿದ್ದರೆ. ಟೌನ್ ಪಂಚಾಯಿತಿಗಳಲ್ಲಿ ನಾವು ಗೆದ್ದುಕೊಂಡು ಬಂದಿದ್ದೇವೆ. ಕಾರ್ಪೊರೇಷನ್, ಮುನಿಸಿಪಾಲಿಟಿ, ಅಸೆಂಬ್ಲಿಯಲ್ಲಿ ಗೆದ್ದಿದ್ದೇವೆ. ಮುಂದೆಯೂ ಸಹ ಗೆಲ್ಲುತ್ತೇವೆ ಎನ್ನುವ ಭರವಸೆ ಇದೆ. ನಾವು ಕಾರ್ಪೊರೇಷನ್, ಮುನಿಸಿಪಾಲಿಟಿಗಳಲ್ಲಿ ಗೆದ್ದೇ ಗೆಲ್ಲುತ್ತೇವೆ ಅದು ನಮ್ಮ ನಂಬಿಕೆ. ಅದರ ಬಗ್ಗೆ ಹೆಚ್ಚು ಚರ್ಚೆ ಬೇಡ. ಮಾನ್ಯ ಮಂತ್ರಿಗಳು ಪುನಃ ಸಂಜೆ ೬ ಗಂಟೆಗೆ ಸೇರಿ ಸೂಕ್ತವಾದ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈಗ ಈ ಸಭೆಯ ಕಾರ್ಯಕಲಾಪಗಳು ನಡೆಯಬೇಕು ಎನ್ನುವ ದೃಷ್ಟಿಯಿಂದ ನಾವು ಇದಕ್ಕೆ ಒಪ್ಪಿಕೊಂಡಿದ್ದೇವೆ.